ವರ್ಷ, ಎರಡು ಹಂತಗಳಲ್ಲಿ ಸಂಪೂರ್ಣವಾಗಿ ರಾಜ್ಯದಲ್ಲಿ ಇರತಕ್ಕಂಥ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಕಟ್ಟಡವನ್ನು ಕಟ್ಟಬೇಕೆನ್ನುವುದು ಸರ್ಕಾರದ ಆದ್ಯತೆಯಲ್ಲಿದೆ. ಅದರ ಬಗ್ಗೆ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎನ್ನುವುದನ್ನು ಮತ್ತು revise ಮಾಡುವ ವಿಚಾರದಲ್ಲಿಯೂ ಸಹ, allocation ವಿಚಾರದಲ್ಲಿ ನಾವು ಆದಷ್ಟು ಬೇಗ, ಎಲ್ಲಾ ವರದಿಯನ್ನು ತರಿಸಿ ನಾವು ಮಾಡುತ್ತೇವೆ.

KARNATAKA LEGISLATIVE ASSEMBLY

Starred Question No. : 5784
Name of the Member : Sri Udasi C.M. (Hanagal)
Date of reply : 13-07-2005
Replies by : Minister for Primary and Secondary Education

Sl. No.	Question	Reply
a.	How many Junior colleges have been started during this year ;	22 Government Pre-University Colleges have been started and permission has given to open 225 private un-aided colleges during the year 2005-06.
b.	How many colleges have been sanctioned in Haveri Dist.	One Govt. Pre-University College at Nesvi village, Herederur taluk of Haveri Dist. have been sanctioned during the year 2005-06. Private un-aided Pre-University College have not been sanctioned in Haveri Dist. during the year.
c.	Depending upon the number of students is their any proposal to start college (details to be furnished)	Request have been received to start Pre-University Colleges during this year at Kusanur and Bommanhalli of Hanagal tq. This request have not been considered as there is no funds in the budget

ಶ್ರೀ ಸಿ.ಎಂ. ಉದಾಸಿ: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಹಾನಗಲ್ ತಾಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭ ಮಾಡುವುದರ ಸಲುವಾಗಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ತಾವೇನಾದರೂ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೀರಾ? ಎನ್ನುವಂತಹ ಪ್ರಶ್ನೆಯನ್ನು ಅವರಿಗೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರಿಸುತ್ತಾ ಹಾನಗಲ್ ತಾಲೂಕಿನ ಕುಸನೂರು ಮತ್ತು ಬೊಮ್ಮನಹಳ್ಳಿಯಲ್ಲಿ ಕಾಲೇಜು ಆರಂಭಿಸುವಂತಹ ಪ್ರಸ್ತಾವನೆ ಮಾತ್ರ ಇದೆ ಎಂದು ಹೇಳಿದ್ದಾರೆಯೇ ಹೊರತು ಅಲ್ಲಿಗೆ ಕೊಡುತ್ತೇವೆ ಎನ್ನುವಂತಹ ಮಾತನ್ನು ಹೇಳಿಲ್ಲ. ನನ್ನ ತಾಲೂಕಿನಲ್ಲಿ 39 ಹೈಸ್ಕೂಲುಗಳಿವೆ ಈ ಹೈಸ್ಕೂಲುಗಳಲ್ಲಿ 10ನೇ ತರಗತಿಯಲ್ಲಿ ಸುಮಾರು 3000 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಲ್ಲಿ ಶೇ. 60ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾದರೂ ಸಹಿತ ಅಂತಹ 1800 ವಿದ್ಯಾರ್ಥಿಗಳ ಪ್ರವೇಶಕ್ಕೆ ಬೇಕಾಗುವಂತಹ ಕಾಲೇಜುಗಳು ಇರಬೇಕಾದುದು ನ್ಯಾಯ ಸಮ್ಮತವಾದುದು. ಅನೇಕ ಸಲ ನಾವು ವಿದ್ಯಾರ್ಥಿಗಳ Drop-out ಬಗ್ಗೆ ಪ್ರಶ್ನೆ ಮಾಡುತ್ತೇವೆ. ಅದಕ್ಕೆ ಪೂರಕವಾದಂತಹ ವ್ಯವಸ್ಥೆಗಳನ್ನು ಕಲ್ಪಿಸದಿದ್ದರೆ ಕಾಲೇಜಿಗೆ ಹೋಗಲಾರದೆ ಶಿಕ್ಷಣದಿಂದ ವಂಚಿತಾಗುವವರು ಗ್ರಾಮೀಣ ಭಾಗದ ಹಳ್ಳಿಯ ಮಕ್ಕಳು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎನ್ನುವಂತಹ ಮುಖ್ಯವಾದ ಪ್ರಶ್ನೆ ಇಲ್ಲಿದೆ. ಆದ್ದರಿಂದ ನಾನು ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನಮ್ಮಲ್ಲಿ ಕೇವಲ 7 Junior College ಗಳು ಇರುವುದರಿಂದ ನಮಗೆ ಇವತ್ತು ಪ್ರವೇಶವನ್ನು ಪಡೆಯಲಿಕ್ಕೆ ಸಾಧ್ಯತೆ ಆಗುವುದಿಲ್ಲ. ಖಾಸಗಿ Junoir College ಗಳೇನಿವೆಯೋ, ಅವು ಪ್ರವೇಶಾವಕಾಶವನ್ನು 100 ಇದ್ದದ್ದನ್ನು 150 ಮಾಡಿಕೊಡಿ ಎಂದು ಕೇಳಿದಾಗ ವಿಭಾಗ ಮಾಡಿಕೊಡಿ ಎಂದು ಕೇಳಿದಾಗಲೂ ಸಹಿತ ಅದಕ್ಕೆ ಅವಕಾಶ ಕಲ್ಪಿಸಿಕೊಡುತ್ತಿಲ್ಲ. ಈ ಕಾರಣದಿಂದ ಸಾವಿರಾರು ಜನ ವಿದ್ಯಾರ್ಥಿಗಳು ಇವತ್ತು ಮುಂದೆ ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರ ಅದಕ್ಕೆ ಯಾವ ರೀತಿಯಾಗಿ ಕ್ರಮ ಕೈಗೊಳ್ಳಲಿಕ್ಕೆ ಇಚ್ಛೆಪಡುತ್ತದೆ? ಹಾನಗಲ್ ತಾಲೂಕಿನಲ್ಲಿ ಯಾವಾಗ ಕಾಲೇಜುಗಳನ್ನು ಪ್ರಾರಂಭ ಮಾಡಲಿಕ್ಕೆ ಅನುಮತಿ ಕೊಡುತ್ತೀರಿ? ಜೊತೆಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸಲು ಖಾಸಗಿ ಶಾಲೆಗಳು ಇಚ್ಛೆಪಟ್ಟರೆ, ಅದನ್ನು ಮಾಡಿಕೊಡುತ್ತೀರಾ? ಹೇಗೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ಕಾಲೇಜು ಪ್ರಾರಂಭ ಮಾಡುವುದಕ್ಕೆ ಈ ಸಾರಿಯ ಬಜೆಟ್ಟಿನಲ್ಲಿ ನಮಗೆ ಹಣ ಕೊಟ್ಟಿರಲಿಲ್ಲ. ಆದರೂ ಕೂಡ ನಮ್ಮಲ್ಲಿ ಇರತಕ್ಕಂಥ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸುಮಾರು 22 ಸರ್ಕಾರಿ ಕಾಲೇಜುಗಳನ್ನು ತೆರೆಯಲು ಇಲಾಖೆ ಅನುಮತಿ ಕೊಟ್ಟಿದೆ. ಅದೇ ರೀತಿ ಸುಮಾರು 225 ಅನುದಾನರಹಿತ ಕಾಲೇಜುಗಳನ್ನು ತೆರೆಯಲು ಅವಶ್ಯಕತೆ ಇರತಕ್ಕಂಥ ಕಡೆ, ನಮ್ಮ ಗೈಡ್‌ಲೈನ್ ಏನು ಫಾಲೋ ಮಾಡಿದ್ದಾರೋ, ಅಂತಹ ಕಡೆಗಳಲ್ಲಿ ಕೂಡಾ ಕೊಟ್ಟಿದ್ದೇವೆ. ಕೇವಲ ನಿಮ್ಮ ಹಾನಗಲ್ ತಾಲೂಕಿನಲ್ಲಿ ಮಾತ್ರವಲ್ಲ. ಬಹಳಷ್ಟು ಕಡೆಗಳಲ್ಲಿ ಕಾಲೇಜುಗಳ ಅವಶ್ಯಕತೆ ಇದೆ. ಹೈಸ್ಕೂಲುಗಳ ಅವಶ್ಯಕತೆ ಇದೆ. 10 ಕಿ.ಮೀಗಿಂತಲೂ ಜಾಸಿ ಮಕ್ಕಳು 37 ಸ್ಥಳಗಳಲ್ಲಿ ಹೋಗುತ್ತಿದ್ದಾರೆ. 5–10 ಕಿಮಿ ಸ್ಥಳಗಳಲ್ಲಿ ಹೈಸ್ಕೂಲಿಗೆ ಸುಮಾರು 300 ಜಾಗಗಳಲ್ಲಿ ಹೋಗುತ್ತಿದ್ದಾರೆ. ಕಾಲೇಜುಗಳ ಅವಶ್ಯಕತೆ ಕೂಡಾ ಇದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ.

ಮಾನ್ಯ ಉಪಮುಖ್ಯಮಂತ್ರಿಗಳ ಜೊತೆಗೂ ಕೂಡಾ ಮಾತನಾಡಿದ್ದೇನೆ. ಈಗಾಗಲೇ ಹೈಸ್ಕೂಲು ಫೈಲ್ ಕಾರ್ಯದರ್ಶಿಗಳಿಂದ ನನ್ನ ಕಡೆ ಕೂಡಾ ಬಂದಿದೆ. ಕಾಲೇಜಸ್ ಫೈಲ್ ಕೂಡ ನನ್ನ ಮುಂದೆ ತನ್ನಿ ಎಂದು ಹೇಳಿದ್ದೇನೆ. ಅದನ್ನು ನಮ್ಮ ಕ್ಯಾಬಿನೆಟ್‌ನಲ್ಲಿಟ್ಟು ಆದಷ್ಟು ಬೇಗ, ಅವಶ್ಯಕತೆ ಇರತಕ್ಕಂಥ ಕಡೆ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಈಗ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಸನ್ಮಾನ್ಯ ಉಪಮುಖ್ಯಮಂತ್ರಿಗಳು ಈ ಸಾರಿಯ ಬಜೆಟ್‌ನಲ್ಲಿ ನಮಗೆ ಹಣದ ಪ್ರಾವಿಷನ್ ಮಾಡಿದರೆ, ನಾವು ಟೀಚರ್ ರಿಕ್ರೂಟ್‌ಮೆಂಟ್ ಸಮೇತ, ಒಂದೇ ಸಲಕ್ಕೆ ಕಾಲೇಜನ್ನೂ ಸಹಿತ ಮುಂದಿನ ವರ್ಷದಿಂದ ಕೊಡುವುದಕ್ಕೆ ನಾವು ಪ್ರಯತ್ನ ಮಾಡಬಹುದು.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಲಭ್ಯವಿರುವಂತಹ ಖಾಸಗಿ ಅನುದಾನಿತ ಜೂನಿಯರ್ ಕಾಲೇಜುಗಳೇನಿವೆಯೋ, ಅವರು ಪ್ರವೇಶ ಸಂಖ್ಯೆ ಹೆಚ್ಚಿಗೆ ಮಾಡಿಕೊಳ್ಳಲಿಕ್ಕೆ ಇಚ್ಛೆ ಪಟ್ಟರೆ ನೀವು ಅವರಿಗೆ ಅದಕ್ಕೆ ಅನುಮತಿಯನ್ನು ಕೊಡುತ್ತೀರಾ? ಎನ್ನುವುದನ್ನು ಕೇಳಿದ್ದೆ. ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಹೇಳಲಿಲ್ಲ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಅಗತ್ಯ infrastructure ಇದ್ದರೆ additional ಅನುಮತಿ ಕೊಡಬಹುದು. ಅದರಲ್ಲಿ ಸಮಸ್ಯೆಯೇನೂ ಇಲ್ಲ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4999
ಸದಸ್ಯರ ಹೆಸರು : ಶ್ರೀ ಸೋಮಲಿಂಗಪ್ಪ (ಸಿರಗುಪ್ಪ)
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
1.	ಶಿರಗುಪ್ಪ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು	ಆರು
2.	ಈ ಕ್ಷೇತ್ರದ ವ್ಯಾಪ್ತಿಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು: ವಿವರ ನೀಡುವುದು;	ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 21 ವೈದ್ಯರ ಹುದ್ದೆ ಮಂಜೂರಾಗಿದ್ದು, 12 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇತರೆ ಸಿಬ್ಬಂದಿ 163 ಮಂಜೂರಾಗಿದ್ದು, ಅದರಲ್ಲಿ 129 ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. (ವಿವರವಾದ ಪಟ್ಟಿ ಲಗತ್ತಿಸಿದೆ)